ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 25-03-1995.

# *ಬ್ರಾಹ್ಮಣ ಜೀವನದ ಅತ್ಯಂತ ಶ್ರೇಷ್ಠ ಖಜಾನೆ- ಸಂಕಲ್ಪದ ಖಜಾನೆ.*

(ब्राह्मण जीवन का सबसे श्रेष्ठ खज़ाना संकल्प का खज़ाना)

ಇಂದು ಬಾಪ್‌ದಾದಾರವರು ನಾಲ್ಕೂ ಕಡೆಯಲ್ಲಿರುವ ಮಕ್ಕಳ ಖಜಾನೆಗಳ ಖಾತೆಯನ್ನು ನೋಡುತ್ತಿದ್ದಾರೆ. ಪ್ರತಿಯೊಂದು ಮಕ್ಕಳಿಗೂ ಬಹಳ ಖಜಾನೆಗಳು ಸಿಕ್ಕಿವೆ ಹಾಗೂ ಅವಿನಾಶಿ ಲಕ್ಕವಿಲ್ಲದಷ್ಟು ಖಜಾನೆಗಳೇ ಸಿಕ್ಕಿವೆ. ಅದು ಕೇವಲ ಈ ಜನ್ಮಕ್ಕಾಗಿ ಅಲ್ಲ ಆದರೆ ಅನೇಕ ಜನ್ಮಗಳವರೆಗೂ ಗ್ಯಾರಂಟಿಯಿದೆ. ಈಗಲೂ ಜೊತೆಯದೆ ಹಾಗೂ ಮುಂದೆಯೂ ಜೊತೆಯಿರುತ್ತದೆ ಅಂದಮೇಲೆ ಇಂದು ವಿಶೇಷವಾಗಿ ಅತ್ಯಂತ ಶ್ರೇಷ್ಠವಾದ ಖಜಾನೆ ಮೇಲಿದೆ ಹಾಗೂ ಸರ್ವ ಖಜಾನೆಗಳ ವಿಶೇಷ ಆಧಾರವೂ ಅದೇ ಆಗಿದೆ. ಅದನ್ನೇ ವಿಶೇಷವಾಗಿ ನೋಡುತ್ತಿದ್ದೆವು- ಎಲ್ಲರ ಖಾತೆಯಲ್ಲಿ ಜಮಾ ಎಷ್ಟಿದೆ? ಪ್ರಾಪ್ತಿಯಾಗಿರುವುದಂತು ಲೆಕ್ಕವಿಲ್ಲದಷ್ಟು ಆಗಿದೆ ಆದರೆ ಜಮಾ ಎಷ್ಟಿದೆ? ಅತ್ಯಂತ ಶ್ರೇಷ್ಠವಾದ ಖಜಾನೆಯು ಸಂಕಲ್ಪದ ಖಜಾನೆ ಆಗಿದೆ ಹಾಗೂ ತಮ್ಮೆಲ್ಲರ ಶ್ರೇಷ್ಠ ಸಂಕಲ್ಪವೇ ಬ್ರಾಹ್ಮಣ ಜೀವನದ ಆಧಾರವೂ ಆಗಿದೆ. ಸಂಕಲ್ಪದ ಖಜಾನೆಯು ಬಹಳ ಶಕ್ತಿಶಾಲಿಯಾಗಿರುವುದಾಗಿದೆ. ಸಂಕಲ್ಪದ ಮೂಲಕವೇ ಸೆಕೆಂಡಿಗಿಂತಲೂ ಕಡಿಮೆ ಸಮಯದಲ್ಲಿಯೇ ಪರಮಧಾಮಕ್ಕೂ ತಲುಪಬಹುದು. ಸಂಕಲ್ಪ ಶಕ್ತಿಯು ಒಂದು ಸ್ವಯಂ ನಿಯಂತ್ರಣ ರಾಕೆಟ್‌ಗಿಂತಲೂ ತೀವ್ರಗತಿಯಿರುವ ರಾಕೆಟ್ ಆಗಿದೆ. ಎಲ್ಲಿಗೆ ಬೇಕೋ ಅಲ್ಲಿಗೆ ತಲುಪಬಹುದು. ಭಲೆ ತಾವು ಕುಳಿತಿರಬಹುದು, ಯಾವುದೇ ಕರ್ಮವನ್ನೇ ಮಾಡುತ್ತಿರಬಹುದು ಆದರೆ ಸಂಕಲ್ಪದ ಖಜಾನೆಯಿಂದ ಅಥವಾ ಶಕ್ತಿಯಿಂದ ಯಾವ ಆತ್ಮನ ಬಳಿ ತಲುಪಬೇಕೆಂದರೂ ತಮ್ಮನ್ನು ಅವರ ಸಮೀಪದಲ್ಲಿರುವ ಅನುಭವ ಮಾಡಬಹುದು. ಯಾವ ಸ್ಥಾನದಲ್ಲಿ ತಲುಪಲು ಬಯಸುತ್ತೀರೋ ಅಲ್ಲಿಗೆ ತಲುಪಬಹುದು. ಯಾವ ಸ್ಥಿತಿಯನ್ನು ತಯಾರು ಮಾಡಿಕೊಳ್ಳಲು ಬಯಸುತ್ತೀರೋ ಭಲೆ ಅದು ಶ್ರೇಷ್ಠವಾಗಿರುವುದೇ ಆಗಿರಲಿ ಅಥವಾ ಖುಷಿಯದಾಗಿರಬಹುದು. ಭಲೆ ವ್ಯರ್ಥವೇ ಆಗಿರಬಹುದು, ಬಲಹೀನತೆಯದೇ ಆಗಿರಬಹುದು, ಸೆಕೆಂಡಿನ ಸಂಕಲ್ಪದಿಂದ ತಮ್ಮದಾಗಿಸಿಕೊಳ್ಳಬಹುದು. ನಾನು ಶ್ರೇಷ್ಠ ಬ್ರಾಹ್ಮಣ ಆತ್ಮನಾಗಿದ್ದೇನೆ ಎಂದು ಸಂಕಲ್ಪ ಮಾಡಿದರೆ ಶ್ರೇಷ್ಠ ಸ್ಥಿತಿ ಹಾಗೂ ಶ್ರೇಷ್ಠ ಅನುಭೂತಿಯಾಗುವುದು ಹಾಗೂ ನಾನಂತು ಬಲಹೀನ ಆತ್ಮನಾಗಿದ್ದೇನೆ. ನನ್ನಲ್ಲಿ ಯಾವುದೇ ಶಕ್ತಿಯಿಲ್ಲ ಎಂಬ ಸಂಕಲ್ಪ ಮಾಡಿದಿರೆಂದರೆ ಸೆಕೆಂಡಿನ ಸಂಕಲ್ಪದಿಂದ ಖುಷಿಯು ಮಾಯವಾಗಿಬಿಡುತ್ತದೆ. ಚಿಂತೆಯ ಚಿಹ್ನೆಯು ಸ್ಥಿತಿಯಲ್ಲಿ ಅನುಭವವಾಗುವುದು ಆದರೆ ಇವೆರಡೂ ಸ್ಥಿತಿಗಳ ಆಧಾರವೂ ಸಂಕಲ್ಪವಾಗಿದೆ. ನೆನಪಿನಲ್ಲಿಯೂ ಕುಳಿತರೂ ಸಂಕಲ್ಪದ ಆಧಾರದಿಂದಲೇ ನಾನು ಬಿಂದುವಾಗಿದ್ದೇನೆ. ನಾನು ಫರಿಶ್ತೆಯಾಗಿದ್ದೇನೆ... ಎಂಬ ಸ್ಥಿತಿಯನ್ನು ತಯಾರು ಮಾಡಿಕೊಳ್ಳುತ್ತೀರಿ. ಸಂಕಲ್ಪದಿಂದಲೇ ಆಗುವುದು. ಅಂದಮೇಲೆ ಸಂಕಲ್ಪವು ಎಷ್ಟೊಂದು ಶಕ್ತಿಶಾಲಿ ಆಗಿದೆ!

ಜ್ಞಾನದ ಆಧಾರವೂ ಸಂಕಲ್ಪವೇ ಆಗಿದೆ. ನಾನು ಆತ್ಮನಾಗಿದ್ದೇನೆ, ಶರೀರವಲ್ಲ ಎಂಬ ಸಂಕಲ್ಪವನ್ನು ಮಾಡುತ್ತೀರಿ. ಇಡೀ ದಿನ ಮನಸ್ಸು-ಬುದ್ಧಿಗೆ ಶುದ್ಧ ಸಂಕಲ್ಪವನ್ನು ಕೊಡುತ್ತೀರಿ ಅಥವಾ ಮನನದಲ್ಲಿ ಶುದ್ಧ ಸಂಕಲ್ಪವನ್ನು ಮಾಡುತ್ತೀರಿ ಅಂದಮೇಲೆ ಮನನ ಶಕ್ತಿಗೂ ಆಧಾರ ಸಂಕಲ್ಪ ಶಕ್ತಿಯಾಗಿದೆ. ಧಾರಣೆ ಮಾಡುತ್ತಿದ್ದೀರಿ ಎಂದರೆ ಮನಸ್ಸು-ಬುದ್ಧಿಗೆ ಸಂಕಲ್ಪವನ್ನು ಕೊಡುತ್ತೀರಿ- ಇಂದು ನಾನು ಸಹನಶಕ್ತಿಯನ್ನು ಧಾರಣೆ ಮಾಡಿಕೊಳ್ಳಬೇಕು. ಈ ಧಾರಣೆಗೂ ಆಧಾರ ಸಂಕಲ್ಪವಾಗಿದೆ. ಸೇವೆ ಮಾಡುತ್ತೀರಿ. ಯೋಜನೆ ತಯಾರು ಮಾಡಿದರೂ ಶುದ್ಧ ಸಂಕಲ್ಪವೇ ನಡೆಯುತ್ತದೆ ಅಲ್ಲವೆ! ಶುದ್ಧ ಸಂಕಲ್ಪದಿಂದಲೇ ಯೋಜನೆಯಾಗುವುದು. ಇದರ ಅನುಭವವಿದೆಯಲ್ಲವೆ! ಅಂದಮೇಲೆ ಬ್ರಾಹ್ಮಣ ಜೀವನದ ವಿಶೇಷ ಶ್ರೇಷ್ಠ ಖಜಾನೆಯೇ ಸಂಕಲ್ಪದ ಖಜಾನೆಯಾಗಿದೆ. ಒಂದುವೇಳೆ ತಾವು ಸಂಕಲ್ಪ ಖಜಾನೆಯನ್ನೇನಾದರೂ ಸಫಲ ಮಾಡಿದರೆ ತಮ್ಮ ಸ್ಥಿತಿ, ಕರ್ಮವೆಲ್ಲವೂ ಇಡೀ ದಿನದಲ್ಲಿ ಬಹಳ ಚೆನ್ನಾಗಿರುತ್ತದೆ ಹಾಗೂ ಸಂಕಲ್ಪದ ಖಜಾನೆಯನ್ನು ವ್ಯರ್ಥವಾಗಿ ಕಳೆದರೆ ಫಲಿತಾಂಶವೇನಾಗುವುದು? ಯಾವ ಸ್ಥಿತಿಯನ್ನು ಬಯಸುತ್ತೀರೋ ಅದಾಗುವುದಿಲ್ಲ. ಹಾಗೂ ವ್ಯರ್ಥ ಸಂಕಲ್ಪವು ಬುದ್ಧಿಯನ್ನೂ ಬಲಹೀನಗೊಳಿಸುತ್ತದೆ ಹಾಗೂ ಸ್ಥಿತಿಯನ್ನೂ ಬಲಹೀನ ಮಾಡುತ್ತದೆ ಎಂಬುದನ್ನು ತಾವೆಲ್ಲರೂ ತಿಳಿದಿದ್ದೀರಿ. ವ್ಯರ್ಥವೆಷ್ಟು ನಡೆಯುತ್ತದೆಯೋ ಅಷ್ಟು ಅವರ ಬುದ್ಧಿಯು ಬಲಹೀನವಾಗುತ್ತದೆ. ಗೊಂದಲಮಯ ಆಗುತ್ತದೆ, ನಿರ್ಣಯವು ಸರಿಯಾಗಿರುವುದಿಲ್ಲ. ಸದಾ ಏನು ಮಾಡುವುದು. ಏನು ಮಾಡಬಾರದು ಎಂಬ ಗೊಂದಲದಲ್ಲಿರುತ್ತದೆ ಹಾಗೂ ಯಥಾರ್ಥ ನಿರ್ಣಯವಿರುವುದಿಲ್ಲ. ಹಾಗೂ ವ್ಯರ್ಥ ಸಂಕಲ್ಪದ ಗತಿಯು ಬಹಳ ತೀವ್ರವಾಗಿರುತ್ತದೆ ಮತ್ತು ಇದರ ಬಗ್ಗೆ ಎಲ್ಲರಿಗೂ ಅನುಭವವಿರುತ್ತದೆ. ವಿಕಲ್ಪದ ಮಾತಲ್ಲ, ವ್ಯರ್ಥದ ಅನುಭವವಂತೂ ಎಲ್ಲರಿಗೂ ಇದೆ. ಇದು ತೀವ್ರಗತಿಯಿರುವ ಕಾರಣ ಅದನ್ನು ನಿಯಂತ್ರಣ ಮಾಡುವುದಕ್ಕೆ ಆಗುವುದಿಲ್ಲ. ನಿಯಂತ್ರಣ ತಪ್ಪಿಹೋಗುತ್ತದೆ, ಬೇಸರವಾಗಿರುತ್ತಾರೆ ಅಥವಾ ಖುಷಿಯು ಮಾಯವಾಗಿಬಿಡುತ್ತದೆ ಅಥವಾ ಮನಸ್ಸು ನೀರಸವಾಗಿರುವುದು. ತನ್ನ ಜೀವನದಲ್ಲಿ ಮಜಾ ಬರದೇ ಇರುವುದು ಇವೆಲ್ಲವೂ ವ್ಯರ್ಥ ಸಂಕಲ್ಪದ ಚಿಹ್ನೆಗಳಾಗಿವೆ. ಹಲವರಿಗೆ ನನ್ನ ಸ್ಥಿತಿಯು ಹೀಗೇಕೆ ಆಯಿತು? ಎಂಬುದೇ ಗೊತ್ತಾಗುವುದಿಲ್ಲ. ಅವರು ದೊಡ್ಡ ದೊಡ್ಡ ವಿಷಯಗಳನ್ನು ನೋಡಿಕೊಳ್ಳುತ್ತಿದ್ದಾರೆ- ಯಾವುದೇ ವಿಕರ್ಮವನ್ನಂತು ಮಾಡಿಯೇ ಇಲ್ಲ, ಯಾವುದೇ ತಪ್ಪುಗಳಾಗಲಿಲ್ಲ ಆದರೂ ಸಂತೋಷ ಏಕೆ ಕಡಿಮೆಯಾಗುತ್ತಿದೆ? ಉದಾಸೀನತೆ ಏಕೆ ಬರುತ್ತಿದೆ, ಜೀವನ ಮಜಾದಿಂದ ಏಕೆ ಇರುತ್ತಿಲ್ಲ? ಜೀವಿಸಬೇಕು ಎಂದು ಕೂಡ ಅನಿಸುತ್ತಿಲ್ಲ. ಇವುಗಳೆಲ್ಲವುಗಳಿಗೆ ಕಾರಣವೇನು? ವಿಕರ್ಮಗಳನ್ನು, ವಿಕಲ್ಪಗಳನ್ನು, ದೊಡ್ಡ ದೊಡ್ಡ ತಪ್ಪುಗಳನ್ನು ಪರಿಶೀಲಿಸಿಕೊಳ್ಳುತ್ತಿದ್ದಾರೆ ಆದರೆ ಈ ಸೂಕ್ಷ್ಮ ತಪ್ಪುಗಳು ಖಜಾನೆಯನ್ನು ವ್ಯರ್ಥವಾಗಿ ಕಳೆಯುತ್ತಿವೆ. ಅರ್ಥಾತ್ ವ್ಯರ್ಥದ ಖಾತೆಯು ಹೆಚ್ಚಾಗುತ್ತಿದೆ. ಹೇಗಾದರೆ ಶಾರೀರಿಕ ರೋಗ ಕೂಡ ಮೊದಲು ದೊಡ್ಡದಾಗಿ ಬರುವುದಿಲ್ಲ, ಚಿಕ್ಕದಾಗಿ ಬರುತ್ತದೆ ಆದರೆ ಆ ಚಿಕ್ಕದು ಬೆಳೆಯುತ್ತಾ ಬೆಳೆಯುತ್ತಾ ದೊಡ್ಡದಾಗಿ ಬಿಡುತ್ತದೆ. ಆ ದೊಡ್ಡದು ಮೇಲೆ ಕಾಣಿಸುತ್ತದೆ ಆದರೆ ಚಿಕ್ಕ ರೂಪ ಕಾಣಿಸುವುದಿಲ್ಲ ಹಾಗೆಯೇ ವ್ಯರ್ಥ ಖಾತೆ, ಕಳೆದುಕೊಳ್ಳುವ ಖಾತೆ ಬೆಳೆಯುತ್ತಾ ಇರುತ್ತದೆ. ಪಾಪದ ಖಾತೆ ಬೇರೆ ಆದರೆ ಇದು ಖಜಾನೆಯನ್ನು ವ್ಯರ್ಥವಾಗಿ ಕಳೆದುಕೊಳ್ಳುವ ಖಾತೆ. ಪಾಪವಂತು ಸ್ಪಷ್ಟವಾಗಿ ಕಾಣಿಸುತ್ತದೆ. ಇಂದು ಈ ಪಾಪವನ್ನು ಮಾಡಿದ್ದೇನೆ ಆದ್ದರಿಂದಲೇ ಸಂತೋಷವಿಲ್ಲ ಎಂದು ಅನುಭವವನ್ನೂ ಮಾಡುತ್ತೀರಿ. ಆದರೆ ಖಜಾನೆಯನ್ನು ಕಳೆಯುವ ಖಾತೆಯ ಪರಿಶೀಲನೆ ಕಡಿಮೆಯಿದೆ. ತಾವು ತಿಳಿಯುವುದೇನು- ಭಲೆ ಇಂದಿನ ದಿನವೂ ಕಳೆಯಿತು. ಒಳ್ಳೆಯದಾಯಿತು. ಅಂತಹ ಯಾವುದೇ ತಪ್ಪುಗಳಾಗಲಿಲ್ಲ ಆದರೆ

ನಿಮ್ಮ ಸಂಕಲ್ಪದ ಶ್ರೇಷ್ಠ ಖಜಾನೆಯನ್ನು ಜಮಾ ಮಾಡಿಕೊಂಡಿದ್ದೇನೆಯೇ? ಅಥವಾ ವ್ಯರ್ಥವಾಗಿ ಕಳೆದುಕೊಂಡಿದ್ದೇನೆಯೇ? ಎನ್ನುವುದನ್ನು ಪರಿಶೀಲನೆ ಮಾಡಿಕೊಳ್ಳಿರಿ. ಜಮಾ ಮಾಡದಿದ್ದರೆ ಕಳೆದಂತೆಯೇ ಆಯಾಯಿತಲ್ಲವೇ! ಪರಿಶೀಲನೆ ಮಾಡುವುದು ಬರುತ್ತದೆಯೇ? ತಮ್ಮನ್ನು ಪರಿಶೀಲಿಸುವವರು ಆಗಿದ್ದೀರಾ ಅಥವಾ ಅನ್ಯರ ಪರಿಶೀಲಕರೇ? ಏಕೆಂದರೆ ತಮ್ಮನ್ನಾದರೆ ಅಂತರ್ಯದಿಂದ ನೋಡಬೇಕಾಗುವುದು, ಅನ್ಯರನು ಬಾಹ್ಯರೂಪದಲ್ಲಿ ನೋಡುವುದಿರುತ್ತದೆ. ಅದೂ ಸಹಜವಾಗುತ್ತದೆ. ಇದರಲ್ಲಿ ಬಾಪ್‌ದಾದಾರವರು ನೋಡುತ್ತಿದ್ದರು- ವಿಶೇಷವಾದ ಶ್ರೇಷ್ಠ ಸಂಕಲ್ಪಗಳ ಖಜಾನೆಯೇನಿದೆಯೋ ಅದು ಬಹಳಷ್ಟು ವ್ಯರ್ಥವಾಗಿಬಿಡುತ್ತದೆ. ವ್ಯರ್ಥವಾಯಿತೇ ಅಥವಾ ಸಮರ್ಥವಾಗಿದೆಯೇ? ಎನ್ನುವುದೂ ಗೊತ್ತಾಗುತ್ತಿಲ್ಲ.

ಬ್ರಹ್ಮಾ ತಂದೆಯವರನ್ನು ಉಳಿತಾಯದ ಅವತಾರನೆಂದು ಹೇಳುತ್ತಾರೆ. ತಾವೆಲ್ಲರೂ ಯಾರಾಗಿದ್ದೀರಿ? ತಾವೆಲ್ಲರೂ ಮಾಸ್ಟರ್ ಆಗಿದ್ದೀರಾ ಅಥವಾ ಇಲ್ಲವೇ? ಉಳಿತಾಯ ಮಾಡುವುದು ಬರುವುದಿಲ್ಲವೇ? ಖರ್ಚು ಮಾಡಲು ಬರುತ್ತದೆಯೇ! ಹಾಗೆ ನೋಡಿದಾಗ ಡಬಲ್ ವಿದೇಶಿಗಳಲ್ಲಿ ಲೌಕಿಕ ಜೀವನದ ರೀತಿಯಿಂದ ಜಮಾದ ಖಾತೆಯನ್ನು ಮಾಡುವುದು ಕಡಿಮೆ. ತಿಂದರು ಮತ್ತು ಖರ್ಚು, ಅಷ್ಟೇ ಸಮಾಪ್ತಿ, ಬ್ಯಾಂಕ್ ಬ್ಯಾಲೆನ್ಸ್ ಇಡುವುದು ಕಡಿಮೆ. ಆದರೆ ಇದರಲ್ಲಂತು ಉಳಿತಾಯದ ಅವತಾರ ಆಗಬೇಕಾಗುವುದು. ಆದ್ದರಿಂದ ಬಾಪ್‌ದಾದಾರವರು ನೋಡುತ್ತಿದ್ದರು- ಎಷ್ಟು ಪ್ರಾಪ್ತಿಯಾಗಿದೆಯೋ, ಎಷ್ಟು ಸಂಕಲ್ಪಗಳ ಶ್ರೇಷ್ಠ ಖಜಾನೆಯು ಜಮಾ ಆಗಬೇಕಾಗಿತ್ತೋ ಅಷ್ಟು ಆಗಿಲ್ಲ. ವ್ಯರ್ಥದ ಲೆಕ್ಕವನ್ನೇ ಹೆಚ್ಚಾಗಿ ನೋಡಿದರು. ಒಂದುವೇಳೆ ವ್ಯರ್ಥಸಂಕಲ್ಪವಿದೆ ಎಂದರೆ ಅನ್ಯ ಖಜಾನೆಗಳು ಸ್ವತಹವಾಗಿಯೇ ವ್ಯರ್ಥವಾಗಿಬಿಡುತ್ತದೆ. ಸಂಕಲ್ಪವು ವ್ಯರ್ಥವಾಯಿತೆಂದರೆ ಕರ್ಮ ಹಾಗೂ ಮಾತೇನಾಗುವುದು? ವ್ಯರ್ಥವೇ ಆಗುವುದಲ್ಲವೆ? ಆಧಾರವೇ ಸಂಕಲ್ಪವಾಗಿದೆ ಅಂದಮೇಲೆ ಸಂಕಲ್ಪವನ್ನು ಪರಿಶೀಲನೆ ಮಾಡಿಕೊಳ್ಳಿರಿ. ನಾನು ಸರಿಯಾಗಿದ್ದೇನೆ. ಕೇವಲ ಎರಡು ನಿಮಿಷಗಳಷ್ಟೇ ಹೋಯಿತು, ಹೆಚ್ಚಾಗೇನೂ ವ್ಯರ್ಥವಾಗಲಿಲ್ಲ ಎಂದು ಹಗುರವಾಗಿ ಬಿಡಬಾರದು, ಆದರೆ ಎರಡು ನಿಮಿಷದಲ್ಲಿ ತಾವು ಪರಿಶೀಲನೆ ಮಾಡಿಕೊಳ್ಳಿರಿ- ಎಷ್ಟು ಸಂಕಲ್ಪಗಳು ನಡೆಯುತ್ತವೆ? ವ್ಯರ್ಥ ಸಂಕಲ್ಪವಂತು ತೀವ್ರವಾಗಿರುತ್ತದೆ ಅಲ್ಲವೆ! ಒಂದು ಸೆಕೆಂಡಿನಲ್ಲಿ ಅಬುವಿನಿಂದ ಅಮೇರಿಕಾಗೂ ತಲುಪಿಬಿಡುವಿರಿ ಹಾಗೆ ನೋಡಿದರೆ ಆಮೇರಿಕಾ ತಲುಪುವುದಕ್ಕೆ ಎಷ್ಟು ಗಂಟೆಗಳೇ ಹಿಡಿಸುತ್ತದೆ! ಅಂದಾಗ ಇಷ್ಟು ತೀವ್ರ ಗತಿಯಿದೆ. ಆ ಗತಿಯನುಸಾರ ಪರಿಶೀಲನೆ ಮಾಡಿಕೊಳ್ಳಿರಿ- ತಮ್ಮ ಸಂಕಲ್ಪ ಶಕ್ತಿಯ ಉಳಿತಾಯ ಮಾಡಿರಿ. ನಂತರ ರಾತ್ರಿಯಲ್ಲಿ ಪರಿಶೀಲಿಸಿರಿ. ಒಂದುವೇಳೆ ಗಮನವಿಟ್ಟು ಯಾವುದೇ ವಸ್ತುವಿನ ಉಳಿತಾಯ ಮಾಡಿದರೆ ಭಲೆ ಉಳಿತಾಯ ಸ್ವಲ್ಪವೇ ಆಗಬಹುದು ಆದರೆ ಉಳಿತಾಯ ಮಾಡುವ ಖುಷಿಯು ವಿಶೇಷವಾಗಿರುತ್ತದೆ. ಒಂದುವೇಳೆ 10 ಪೌಂಡ್ ಅಥವ ಡಾಲರ್ ಖರ್ಚಾಗಬೇಕು ಮತ್ತು ತಾವು ಒಂದು ಪೌಂಡ್ ಅಥವಾ ಡಾಲರ್ ಉಳಿಸಿದರೆ, ನಾನು ಉಳಿತಾಯ ಮಾಡಿ ಬಂದಿದ್ದೇನೆಂಬ ಖುಷಿಯು ಬಹಳ ದೊಡ್ಡದಾಗಿರುತ್ತದೆ. ಹಾಗಾದರೆ ತಮ್ಮ ಸಂಕಲ್ಪಗಳ ಮೇಲೆ ನಿಯಂತ್ರಣಾ ಶಕ್ತಿಯನ್ನಿಡಿ. ನಾನು ಬಯಸುತ್ತಿರಲಿಲ್ಲ, ಅದನ್ನು ತಿಳಿಯುತ್ತೇನೆ ಆದರೆ ಏನು ಮಾಡಲಿ ಆಗಿಬಿಡುತ್ತದೆ. ಎಂದು ಹೇಳಬಾರದು. ಆಗಿಬಿಡುತ್ತದೆ ಎಂದು ಯಾರು ಹೇಳುತ್ತಾರೆ? ಮಾಲೀಕನೇ ಅಥವಾ ಗುಲಾಮನೇ? ಮಾಲೀಕನಂತು ನಿಯಂತ್ರಣದಲ್ಲಿ ಇರುತ್ತಾನಲ್ಲವೆ. ಒಂದುವೇಳೆ ಯಾರೇ

ಮಾಲೀಕನಿಗೇ ಮೋಸ ಮಾಡಿಬಿಟ್ಟರೆ, ಅವರು ಮಾಲೀಕನೇ? ಹಾಗಾದರೆ ನಿಯಂತ್ರಣಾ ಶಕ್ತಿಯಿದೆಯೇ ಎಂಬುದನ್ನು ಪರಿಶೀಲಿಸಿರಿ. ಒಂದಂತೂ ಉಳಿತಾಯ ಮಾಡಿರಿ, ವ್ಯರ್ಥದ ಬದಲು ಸಮರ್ಥದ ಖಾತೆಯಲ್ಲಿ ಜಮಾ ಮಾಡಿರಿ. ಇನ್ನೊಂದು- ಒಂದುವೇಳೆ ಉಳಿತಾಯ ಮಾಡಲು ಸಾಧ್ಯವಾಗುತ್ತಿಲ್ಲವೆಂದರೆ ವ್ಯರ್ಥವನ್ನು ಸಮರ್ಥ ಸಂಕಲ್ಪಗಳಲ್ಲಿ ಪರಿವರ್ತನೆ ಮಾಡಿರಿ. ಒಂದುವೇಳೆ ನಿಯಂತ್ರಣವಿಲ್ಲವೆಂದರೆ ಪರಿವರ್ತನೆಯನ್ನಾದರೂ ಮಾಡಬಹುದಲ್ಲವೇ? ಅದರ ಗತಿಯನ್ನು ಬೇಗನೆ ಪರಿವರ್ತನೆ ಮಾಡಿರಿ. ಇಲ್ಲದಿದ್ದರೆ ಹವ್ಯಾಸವಾಗಿಬಿಡುತ್ತದೆ. ಒಂದು ಗಂಟೆಗಾದರೂ ಪರಿಶೀಲನೆ ಮಾಡಿಕೊಂಡರೆ ಅದರಲ್ಲಿ 5-10 ನಿಮಿಷವಾದರೂ ವ್ಯರ್ಥ ಸಂಕಲ್ಪದಲ್ಲೇನು ಹೋಗುತ್ತಿದೆ, ಆ 5 ನಿಮಿಷವೂ ವ್ಯರ್ಥದಿಂದ ಸಮರ್ಥದಲ್ಲಿ ಜಮಾ ಆಗಿಬಿಡಲಿ, ಇದರಿಂದ 12 ಗಂಟೆಗಳಲ್ಲಿ 5-5 ನಿಮಿಷವೂ ಎಷ್ಟಾಗಿಬಿಡುತ್ತದೆ? ಮತ್ತು ಖುಷಿಯೆಷ್ಟಾಗುತ್ತದೆ? ಎಷ್ಟು ಶ್ರೇಷ್ಠ ಸಂಕಲ್ಪಗಳ ಖಾತೆ ಜಮಾ ಆಗುತ್ತದೆಯೋ, ಅದು ಸಮಯಕ್ಕೆ ಕೆಲಸಕ್ಕೆ ಬರುತ್ತದೆ. ಇಲ್ಲದಿದ್ದರೆ ಹೇಗೆ ಸ್ಥೂಲ ಧನದಲ್ಲೇನಾದರೂ ಜಮಾ ಆಗಿರದಿದ್ದರೆ ಸಮಯಕ್ಕೆ ಮೋಸವನ್ನು ಅನುಭವಿಸುತ್ತೀರೋ ಹಾಗೆಯೇ ಇಲ್ಲಿಯೂ ಯಾವಾಗ ಯಾವುದೇ ದೊಡ್ಡ ಪರೀಕ್ಷೆಯು ಬಂದಾಗ ಮನಸ್ಸು-ಬುದ್ಧಿಯು ಖಾಲಿ-ಖಾಲಿಯೆನಿಸುತ್ತದೆ. ಶಕ್ತಿಯು ಇರುವುದಿಲ್ಲ. ಅದಕ್ಕೇನು ಮಾಡಬೇಕು? ಜಮಾ ಮಾಡುವುದು ಕಲಿಯಿರಿ. ಮುಂದಿನ ವರ್ಷ ನೋಡಿದಾಗ ಎಲ್ಲರ ಶ್ರೇಷ್ಠ ಸಂಕಲ್ಪಗಳ ಖಾತೆಯು ಸಂಪನ್ನವಾಗಿರಲಿ, ಖಾಲಿ-ಖಾಲಿಯಾಗಿರಬಾರದು ಇದೇ ಶ್ರೇಷ್ಠ ಸಂಕಲ್ಪಗಳ ಖಜಾನೆಯು ಶ್ರೇಷ್ಠ ಪ್ರಾಲಬ್ಧದ ಆಧಾರವಾಗುವುದು. ಜಮಾ ಮಾಡಿಕೊಳ್ಳಲು ಬರುತ್ತದೆಯೇ? ಅಥವಾ ಯಾರಿಗಾದರೂ ಬರುತ್ತಿಲ್ಲವೇ. ರಾಜಯೋಗಿಗಳು ಎಂದರೆ ಪರಿಶೀಲಿಸಿಕೊಳ್ಳುವುದು ಮತ್ತು ಜಮಾ ಮಾಡಿಕೊಳ್ಳುವುದು ಕೂಡ ಬರುತ್ತದೆ. ಯಾರ ಖಾತೆ ಜಮಾ ಆಗಿದೆಯೋ ಅವರ ನಡವಳಿಕೆ, ಮುಖ ಸದಾ ಸಂಪನ್ನವಾಗಿ ಕಾಣಿಸುತ್ತದೆ. ಒಮ್ಮೊಮ್ಮೆ ಒಂದು ರೀತಿ, ಇನ್ನೊಮ್ಮೆ ಇನ್ನೊಂದು ರೀತಿ ಇಂದು ನೋಡಿದರೆ ಮುಖ ಬಹಳ ಹೊಳೆಯುತ್ತಿರುತ್ತದೆ. ನಾಳೆ ನೋಡಿದರೆ ಉದಾಸೀನ, ಹೀಗೆ ಇರುವುದಿಲ್ಲ. ದಿನವಿಡೀ ಪರಿಶೀಲಿಸಿಕೊಳ್ಳಿರಿ. ನೀವು ಎಷ್ಟು ಫೋಸುಗಳನ್ನು ಬದಲಾಯಿಸುತ್ತೀರಿ? ಎಂದಾದರೂ ಪರಿಶೀಲನೆ ಮಾಡಿದ್ದೀರಾ? ಬಹಳ ಫೋಸು(ಭಾವಚಿತ್ರ)ಗಳು ಬದಲಾಗುತ್ತವೆ. ಬಾಪ್‌ದಾದಾರವರಂತು ಎಲ್ಲರ ಭಾವಚಿತ್ರಗಳನ್ನು ನೋಡುತ್ತಾರಲ್ಲವೆ! ಕೆಲಕೆಲವೊಮ್ಮೆ ನೋಡುತ್ತಾರೆ- ಕೆಲವು ಮಕ್ಕಳು ಕರ್ಮ ಮಾಡಲು ಹೆಚ್ಚು ಸಮಯವನ್ನು ಉಪಯೋಗಿಸುತ್ತಿಲ್ಲ ಆದರೆ ಮಾಡಿರುವ ಕರ್ಮದ ಪಶ್ಚಾತ್ತಾಪದಲ್ಲಿ ಹೆಚ್ಚು ಸಮಯವನ್ನು ಕಳೆಯುತ್ತಾರೆ. ನಂತರ ಹೇಳುತ್ತಾರೆ- ಮೂರು ದಿನವಾಗಿಬಿಟ್ಟಿತು. ಖುಷಿ ಮಾಯವಾಗಿಬಿಟ್ಟಿತು, ಏಕೆ ಮಾಯವಾಯಿತು, ಎಲ್ಲಿ ಹೋಯಿತು, ಯಾರು ತೆಗೆದುಕೊಂಡು ಹೋದರು? ಖಜಾನೆಯಂತು ತಮ್ಮದು ಆದರೆ ತೆಗೆದುಕೊಂಡು ಹೋಗಿರುವುದಾದರೂ ಯಾರು? ಪಶ್ಚಾತ್ತಾಪ ಪಡುವುದು ಒಳ್ಳೆಯದು ಏಕೆಂದರೆ ಪಶ್ಚಾತ್ತಾಪವು ಪರಿವರ್ತನೆ ಮಾಡಿಸುತ್ತದೆ ಆದರೆ ಅದರಲ್ಲಿಯೇ ಹೆಚ್ಚು ಸಮಯವನ್ನು ತೊಡಗಿಸಬಾರದು. ಪಶ್ಚಾತ್ತಾಪದಲ್ಲಿ ಅಳುತ್ತಾ ಇದ್ದರೆ ಇಡೀ ವಾರವೇ ಅಳುತ್ತಿರಬೇಕಾಗುತ್ತದೆ ಪಶ್ಚಾತ್ತಾಪವಾಯಿತು. ಬಹಳ ಒಳ್ಳೆಯದು ಆದರೆ ಪಶ್ಚಾತ್ತಾಪ ಮಾಡುವುದು ಮತ್ತು ಪ್ರಾಪ್ತಿಯ ಖುಷಿಯನ್ನು ತಂದುಕೊಳ್ಳಬೇಕು. ಇನ್ನು ಮುಂದೆ ಸೆಕೆಂಡಿನಲ್ಲಿ ನಿರ್ಣಯ ಮಾಡಿರಿ- ಇದನ್ನು ಮಾಡಬೇಕು ಅಥವಾ ಮಾಡಬಾರದು. ಮುಂಚೆಯೇ ತಿಳಿಸಿದೆವಲ್ಲವೆ- ನಾಟ್ ಅಥವಾ ಡಾಟ್ ಇವೆರಡು ಶಬ್ದಗಳನ್ನು ನೆನಪಿಟ್ಟುಕೊಳ್ಳಿರಿ. ನಾಟ್ ಎಂದುಕೊಂಡಿರಿ ಮತ್ತು ಡಾಟ್ ಇಡಲಾಯಿತು. ನಾಲ್ಕು ಗಂಟೆಗಳು ಅಳುತ್ತಿದ್ದೀರಿ, ಕಣ್ಣೀರು ಬರಲಿಲ್ಲ ಆದರೆ ಒಳಗೇ ಅಳುತ್ತಿದ್ದಿರಿ. ಅರ್ಧಗಂಟೆ ಕಣ್ಣೀರು ಸುರಿಸಿದಿರಿ ಮತ್ತು

ನಾಲ್ಕುಗಂಟೆಗಳು ಮನಸ್ಸಿನಿಂದ ಅಳುತ್ತಿದ್ದಿರಿ. ಇಷ್ಟೊಂದು ಪಶ್ಚಾತ್ತಾಪ ಪಡುವುದು ಬೇಡ, ಇದೇ ಬಹಳಷ್ಟಾಯಿತು. ಪಶ್ಚಾತ್ತಾಪದಲ್ಲಿಯೂ ಮಿತಿಯಿರಲಿ.

ಬಾಪ್‌ದಾದಾರಿಗೆ ಡಬಲ್ ವಿದೇಶಿಗಳ ಒಂದು ವಿಶೇಷತೆ ಬಹಳ ಇಷ್ಟವಾಗುತ್ತದೆ, ಅಳುವುದು ಇಷ್ಟವಾಗುವುದಿಲ್ಲ ಆದರೆ ಒಂದು ವಿಶೇಷತೆ ಇಷ್ಟವಾಗುತ್ತದೆ. ಅದು ಯಾವುದು? ಸತ್ಯವಾದ ಹೃದಯದವರ ಮೇಲೆ ಪ್ರಭು ಪ್ರಸನ್ನರಾಗುವರು. ಸತ್ಯವನ್ನು ತಿಳಿಸುವುದರಲ್ಲಿ ಭಯಪಡುವುದಿಲ್ಲ, ಬಚ್ಚಿಡುವುದಿಲ್ಲ. ಹಾಗಾದರೆ ಸತ್ಯ ಹೃದಯವಿರುವ ಕಾರಣದಿಂದ ತಂದೆಯವರ ಡಬಲ್ ಪ್ರೀತಿಗೂ ಪಾತ್ರರಾಗಿದ್ದೀರಿ. ತಾವು ಸತ್ಯ ಹೃದಯವನ್ನಿಟ್ಟಿದ್ದೀರಿ. ಪ್ರಭುವನ್ನಂತು ಖುಷಿಪಡಿಸಿದ್ದೀರಿ ಆದರೆ ಪರಿವರ್ತನೆಯೂ ಸಹ ಬಹಳ ಬೇಗನೆ ಮಾಡಬೇಕು. ಅದನ್ನು ಮತ್ತೆ-ಮತ್ತೆ ತಮ್ಮ ಆಂತರ್ಯದಲ್ಲಿ ವರ್ಣನೆ ಮಾಡಬಾರದು- ಇದಾಯಿತು. ಇದಾಯಿತು.... ಅದಾಯಿತು ಅಷ್ಟೇ ಸಮಾಪ್ತಿ ಮಾಡಿರಿ. ಇನ್ನು ಮುಂದೆ ಗಮನವಿರಲಿ ಆದರೆ ಕೆಲವೊಮ್ಮೆ ಗಮನದ ಬದಲು ಒತ್ತಡದಲ್ಲಿ ಬಂದುಬಿಡುತ್ತೀರಿ, ಅದನ್ನು ಮಾಡಬಾರದು. ಅತ್ಯಂತ ದೊಡ್ಡ ನ್ಯಾಯಾಧೀಶರೇ ಆಗಿರಿ, ಇಲ್ಲಿಯೂ ಮುಖ್ಯ ನ್ಯಾಯಾಧೀಶರು ಆಗುತ್ತಾರಲ್ಲವೆ ತಾವಂತು ಮುಖ್ಯ ನ್ಯಾಯಾಧೀಶರಿಗೂ ಮುಖ್ಯ ಆಗಿದ್ದೀರಿ. ತಮಗಾಗಿ ಬಹಳ ಬೇಗನೆ ಇದು ಸರಿ ಅಥವಾ ತಪ್ಪು ಎಂಬ ನಿರ್ಣಯ ಮಾಡುವವರಾಗಿರಿ. ತಪ್ಪಾಗಿದ್ದರೆ ಮಾಡಬಾರದು ಮತ್ತು ಬಿಂದುವನ್ನಿಡಿ. ಹೀಗಾಗದಿದ್ದರೆ ಹೀಗಾಗುವುದು, ಹೀಗೆ ಮಾಡದಿದ್ದರೆ ಹೀಗಾಗುವುದು... ಇದೇ ಕಳೆಯುವ ಖಾತೆಯನ್ನು ಜಮಾ ಮಾಡುತ್ತಾರೆ. ಸಂಪಾದನೆಯು ಸಮಾಪ್ತಿಯಾಗಿಬಿಡುತ್ತದೆ ಮತ್ತು ಜಮಾ ಆಗಿರುವ ಖಾತೆಯೂ ಸಮಾಪ್ತಿಯಾಗುವುದು. ಅದರ ಬಗ್ಗೆ ಚಿಂತನೆ ಮಾಡಿರಿ ಆದರೆ ವ್ಯರ್ಥ ಮಾಡಬಾರದು ಮತ್ತು ಉಳಿತಾಯ ಮಾಡಿ ತೋರಿಸಿರಿ- ನಾವು ಒಂದು ಗಂಟೆಯಿಂದ ಇಷ್ಟು ಉಳಿತಾಯ ಮಾಡಿದೆವು ಎಂಬ ಫಲಿತಾಂಶವನ್ನು ತೋರಿಸಿರಿ ವ್ಯರ್ಥದ ಆರಂಭವಾಯಿತು ಆದರೆ ನಾವು ಪರಿವರ್ತನೆ ಮಾಡಿದೆವು ಮತ್ತು ಜಮಾ ಮಾಡಿದ್ದೇವೆ. ವ್ಯರ್ಥವನ್ನು ಉಳಿತಾಯ ಮಾಡಿರಿ, ಈ ಖಾತೆಯೇ ಬಹಳ ಖುಷಿ ಕೊಡುತ್ತದೆ.

ಈ ವರ್ಷದಲ್ಲಿ ಬಾಪ್‌ದಾದಾರವರು ಎಲ್ಲರ ಉಳಿತಾಯದ ಖಾತೆಯನ್ನು ಸಂಪನ್ನವಾಗಿರುವಂತೆ ನೋಡಲು ಬಯಸುತ್ತಾರೆ. ಮಾಡಲು ಸಾಧ್ಯವಿದೆಯಲ್ಲವೇ? ಹಾಗಾದರೆ ಈಗ ತೀವ್ರಗತಿಯಿಂದ ಮಾಡಬೇಕು ಏಕೆಂದರೆ ಸಮಯವೂ ಸಹ ತೀವ್ರವಾಗಿ ಸಾಗುತ್ತಿದೆಯಲ್ಲವೆ! ಇದರಲ್ಲಿ ನಂಬರ್‌ವನ್ ಯಾರು ಹೋಗುತ್ತಾರೆ? ಉಳಿತಾಯ ಮಾಡುವ ಖಾತೆ ಎಲ್ಲರಿಗಿಂತಲೂ ಹೆಚ್ಚಾಗಿ ಯಾರದಿದೆ? ಉಳಿತಾಯ ಮಾಡುವ ಖಾತೆಯಲ್ಲಿ ನಂಬರ್‌ವಾರ್ ಯಾರಾರು ಇರುತ್ತಾರೆ ಎಂಬ ಪಟ್ಟಿಯನ್ನೂ ತೆಗೆಯುತ್ತೇವೆ. ಮತ್ತೇನಾದರೂ ತಾವು ಸಂಕಲ್ಪವನ್ನು ನಿಯಂತ್ರಣ ಮಾಡಿದರೆ ಅನ್ಯರನ್ನು ನಿಯಂತ್ರಣ ಮಾಡಲು ಕಷ್ಟಪಡುವುದಿಲ್ಲ. ಕೆಲವರು ಹೇಳುತ್ತಾರೆ- ಹೇಳಲು ಬಯಸುತ್ತಿರಲಿಲ್ಲ ಆದರೆ ಹಾಗೆಯೇ ಬಾಯಿಂದ ಬಂದುಬಿಟ್ಟಿತೆಂದು ಹೇಳುತ್ತಾರೆ. ಆದರೆ ಯಾವಾಗ ಮಾತು ಹೊರಬಂದಿತು ಅಥವಾ ಕರ್ಮವೂ ಆಯಿತೆಂದಾಗ, ಅದಕ್ಕೆ ಮೊದಲು ಸಂಕಲ್ಪ ಬರುತ್ತದೆ. ಒಂದುವೇಳೆ ಯಾರೊಂದಿಗೇ ಕ್ರೋಧ ಮಾಡಬೇಕೆಂದರೆ ಮೊದಲು ಸಂಕಲ್ಪದಲ್ಲಿ ಯೋಜನೆಯಾಗುವುದು- ಹೀಗೆ ಮಾಡುತ್ತೇವೆ, ಹೀಗೆ ಮಾತನಾಡೋಣ. ಇವರೇನು ತಿಳಿಯುತ್ತಿದ್ದಾರೆ. ಎಂಬ ಯೋಜನೆಯು ನಡೆಯುತ್ತದೆ. ನಂತರ ಅದರಲ್ಲಿ ಸಮಯವನ್ನೂ ಉಪಯೋಗ ಮಾಡುತ್ತಾರೆ. ಯಾವಾಗ ಸಮಯ

ಬರುತ್ತದೆ. ಯಾರು ಬರುತ್ತಾರೆ. ಇದನ್ನೂ ನೋಡುತ್ತಿರುತ್ತಾರೆ. ಅಂದರೆ ಸಂಕಲ್ಪದ ಖಜಾನೆಯ ಜೊತೆ ಸಮಯದ ಖಜಾನೆಯೂ ವ್ಯರ್ಥವಾಗುವುದು. ಇವೆರಡಕ್ಕೂ ಸಂಬಂಧವಿದೆ ಆದ್ದರಿಂದ ಸಂಕಲ್ಪದ ಉಳಿತಾಯದಿಂದ ಸಮಯ ಮತ್ತು ವಾಣಿಯ ಉಳಿತಾಯವು ಸ್ವತಹವಾಗಿಯೇ ಆಗಿಬಿಡುತ್ತದೆ.

ಈಗ ಡೈಮಂಡ್ ಜುಬ್ಲಿ ಆಚರಿಸಿಕೊಳ್ಳಲು ಪ್ಲಾನ್ ತಯಾರು ಮಾಡುತ್ತಿದ್ದೀರಲ್ಲವೇ? ಡೈಮಂಡ್ ಜುಬ್ಲಿಯಲ್ಲಿ ಬಾಪ್‌ದಾದಾ ಮಕ್ಕಳ ಒಂದು ದೃಶ್ಯವನ್ನು ನೋಡ ಬಯಸುತ್ತಿದ್ದಾರೆ. ದೀಪಾವಳಿ ಅಥವಾ ಯಾವುದಾದರೂ ಉತ್ಸವವಾಗುತ್ತಿದ್ದಾಗ ಪ್ರತಿಯೊಂದು ಸ್ಥಾನದಲ್ಲಿ ಲೈಟ್ಸ್ ಹಚ್ಚಿರುವುದು ಕಾಣಿಸುತ್ತದೆಯಲ್ಲವೇ, ನೋಡಿರುವಿರಲ್ಲವೇ? ನಿಮ್ಮ ದೇಶಗಳಲ್ಲಿ (ವಿದೇಶಗಳು) ಆದರೆ ಕ್ರಿಸ್ ಮಸ್ ಆಚರಿಸಿಕೊಳ್ಳುತ್ತಾರೆ ಆಗ ಎಷ್ಟು ಬಲ್ಬುಗಳು ಪ್ರಕಾಶಿಸುತ್ತಿರುತ್ತವೆ. ಎಲ್ಲವೂ ಪ್ರಕಾಶಿಸುತ್ತಲೇ ಇರುತ್ತವೆ ಇಲ್ಲಿ ನೋಡಿದರೂ, ಅಲ್ಲಿ ನೋಡಿದರೂ, ಎಲ್ಲೆಲ್ಲಿಯೂ ಪ್ರಕಾಶಿಸುತ್ತಲೇ ಇರುತ್ತವೆ. ಹಾಗೆಯೇ ಡೈಮಂಡ್ ಜುಬಿಲಿಯಲ್ಲಿ ನಿಜವಾದ ಆತ್ಮಿಕ ವಜ್ರ ಪ್ರತಿಯೊಂದು ಸ್ಥಾನದಲ್ಲಿ ಹೊಳೆಯುತ್ತಿರುವಂತೆ ಕಾಣಿಸಬೇಕು ಈ ಹೊಳಪು ಏನು ಎಂದು ಎಲ್ಲರೂ ಅನುಭವ ಮಾಡಿಕೊಳ್ಳಬೇಕು ವಜ್ರವು ಹೊಳೆಯುತ್ತಾ ಇರುತ್ತದೆ ಅಲ್ಲವೇ ಮಣ್ಣಿನಲ್ಲಿ ಮುಚ್ಚಿಟ್ಟರೂ ಅದರ ಹೊಳಪನ್ನು ಕಳೆದುಕೊಳ್ಳುವುದಿಲ್ಲ ಹಾಗೆಯೇ ನೀವು ಎಲ್ಲಿದ್ದರೂ ಯಾವ ದೇಶದಲ್ಲಿದ್ದರೂ ಯಾವ ಸ್ಥಾನದಲ್ಲಿದ್ದರೂ ಎಲ್ಲರೂ ನಿಮ್ಮನ್ನು ಪ್ರಕಾಶಿಸುತ್ತಿರುವ ವಜ್ರದಂತೆ ಅನುಭವ ಮಾಡಿಕೊಳ್ಳಬೇಕು. ಅವರಿಗೆ ತರಂಗಗಳು ತಲುಪಬೇಕು. ಎಲ್ಲಿಯಾದರೂ ಲೈಟ್ಸ್ ಪ್ರಕಾಶಿಸುತ್ತಿದ್ದರೆ ಸುಂದರವಾದ ಅಲಂಕಾರವಿದ್ದರೆ ನೀವು ನೋಡಬೇಕೆಂದುಕೊಂಡರೂ, ಬೇಡವೆಂದುಕೊಂಡರೂ ನಿಮ್ಮ ದೃಷ್ಟಿ ಆ ಕಡೆ ಆಕರ್ಷಣೆಯಾಗಿ ಬಿಡುತ್ತದೆ ಅಲ್ಲವೇ. ಹಾಗೆಯೇ ಇಡೀ ವಿಶ್ವದಲ್ಲಿ ಎಷ್ಟು ವಜ್ರಗಳು ಇವೆ ಇಡೀ ವಿಶ್ವದಲ್ಲಿ ಪ್ರಕಾಶಿಸುತ್ತಿರುವ ವಜ್ರಗಳು ತಮ್ಮ ಹೊಳಪನ್ನು ತೋರಿಸಿದಾಗ ಆ ದೃಶ್ಯ ಹೇಗಿರುತ್ತದೆ? ಬಹಳ ಚೆನ್ನಾಗಿರುತ್ತೆ ಅಲ್ಲವೇ. ಆ ದೃಶ್ಯವನ್ನು ಬಾಪ್‌ದಾದಾ ಫೋಟೋ ತೆಗೆಯುತ್ತಾರೆ ಏಕೆಂದರೆ ನೀವಂತೂ ಎಲ್ಲಾ ಕಡೆಗೆ ಹೋಗಲಾಗುವುದಿಲ್ಲ ಬಾಪ್‌ದಾದಾರವರು ಹೋಗಬಲ್ಲರು. ಈ ಸ್ಥೂಲ ಕ್ಯಾಮರಾ ತೆಗೆದುಕೊಂಡು ಎಲ್ಲಿಗೆ ಹೋಗುತ್ತೀರಿ ಹೀಗೆ ಪ್ರಕಾಶಿಸುತ್ತಿರುವ ವಜ್ರಗಳ ದೃಶ್ಯ ವಿಶ್ವದಲ್ಲಿ ಕಾಣಿಸಬೇಕು. ಇದರಲ್ಲಿ ಯಾವುದೋ ಅದ್ಭುತವಿದೆ ಎಂದು ಪ್ರಾರಂಭವಾಗಬೇಕು ಮೊದಲು ಇದರಲ್ಲಿ ಏನೋ ಇದೆ ಎನ್ನುತ್ತಾರೆ. ಕೊನೆಗೆ ಎಲ್ಲಾ ಇದರಲ್ಲಿಯೇ ಇದೆ ಎನ್ನುತ್ತಾರೆ. ಹಾಗಾದರೆ ಅದಕ್ಕೆ ಆಧಾರ ಸಂಕಲ್ಪದ ಖಜಾನೆಯ ಖಾತೆಯನ್ನು ಜಮಾ ಮಾಡಿಕೊಳ್ಳಬೇಕು. ಚಿಕ್ಕ ಚಿಕ್ಕ ವಿಷಯಗಳಲ್ಲಿ ಪುರುಷಾರ್ಥ ಮಾಡಿ ಬೇಸತ್ತು ಹೋಗಬೇಡಿ. ಏರ್ಷೆ ಇನ್ನೂ ಬರುತ್ತಿದೆ, ಸ್ವಲ್ಪ ಕ್ರೋಧ ಬರುತ್ತಿದೆ, ಮಾತು ಹಾಗೆಯೇ ಬಂದು ಬಿಡುತ್ತಿದೆ ಹೀಗೆ ಒಂದೊಂದು ವಿಷಯದಲ್ಲಿ ಶ್ರಮ ಮಾಡಬೇಡಿರಿ. ಬೀಜವನ್ನು ಸರಿ ಮಾಡಿದರೆ ವೃಕ್ಷ ಸ್ವತಹವಾಗಿ ಸರಿ ಹೋಗುತ್ತದೆ ಅರ್ಥಾತ್ ಇವೆಲ್ಲವುಗಳಿಗೆ ಬೀಜ ಸಂಕಲ್ಪವೇ ತಾನೇ ಆದ್ದರಿಂದ ಸಂಕಲ್ಪ ಶ್ರೇಷ್ಠವಾಗಿದ್ದರೆ ಎಲ್ಲವೂ ಶ್ರೇಷ್ಠವಾಗಿ ಆದಂತೆಯೇ. ಶ್ರಮ ಮಾಡಬೇಕಾಗಿರುವ ಅವಶ್ಯಕತೆ ಇಲ್ಲ. ಇಲ್ಲದಿದ್ದರೆ ಶ್ರಮ ಅನುಭವದಲ್ಲಿ ಬರುತ್ತದೆ. ಈಗ ಇನ್ನೂ ಎಷ್ಟು ಮಾಡಬೇಕು ಎಂದು 10 ವರ್ಷಗಳಾಗಿವೆ, 20 ವರ್ಷಗಳಾಗಿವೆ, 40 ವರ್ಷಗಳಾಗಿವೆ, 50 ವರ್ಷಗಳಾಗಿವೆ ಇನ್ನೂ ಈ ಬಲಹೀನತೆ ಹೋಗಲಿಲ್ಲ ಎಂದು. ಬುನಾದಿಯನ್ನು ಪರಿಶೀಲನೆ ಮಾಡಿಕೊಂಡರೆ ನಾಲ್ಕು ಸೆಕೆಂಡುಗಳು ಕೂಡ ಹಿಡಿಸುವುದಿಲ್ಲ. ನಿಮ್ಮ ಮನಸಾ ಸೇವೆ ಎಷ್ಟು ವೇಗವಾಗಿ ಆಗುತ್ತದೆ. ಈಗ

ಮನಸಾ ಶಕ್ತಿ ವ್ಯರ್ಥವಾಗಿ ಹೋಗುತ್ತಿದೆ. ಕಾರ್ಯದಲ್ಲಿ ಬರುತ್ತಿಲ್ಲ ಆದರೆ ಅದನ್ನು ಉಳಿತಾಯ ಮಾಡಿದರೆ ಕಾರ್ಯದಲ್ಲಿ ಉಪಯೋಗವಾಗುತ್ತದೆ ಅಲ್ಲವೇ. ಆಗ ಶ್ರಮ ಮಾಡುವ ಅವಶ್ಯಕತೆ ಇರುವುದಿಲ್ಲ. ನಡೆಯುತ್ತಾ ನಡೆಯುತ್ತಾ ಲೈಟ್ ಹೌಸ್, ಮೈಟ್ ಹೌಸ್ ನಂತೆ ಅನುಭವವಾಗುತ್ತಿರಿ. ಲೈಟ್ ಹೌಸ್ ಒಬ್ಬೊಬ್ಬರ ಹತ್ತಿರ ಹೋಗಿ ಮಾರ್ಗವನ್ನು ಹೇಳುವುದಿಲ್ಲ. ದೂರದಿಂದಲೇ ಇದು ಮಾರ್ಗ ಎಂದು ಗಮನ ಸೆಳೆಯುತ್ತದೆ. ನೀವೆಲ್ಲರೂ ಕೂಡ ಹೊಳೆಯುವ ಡೈಮಂಡ್, ಲೈಟ್ ಹೌಸ್, ಮೈಟ್ ಹೌಸ್ ಆಗಿ ಬಿಟ್ಟರೆ ವಿಶ್ವದಲ್ಲಿ ಏನು ಇರುತ್ತದೆ? ಅಂದಕಾರವಿರುತ್ತದೆಯೇ? ಇಷ್ಟವೇ? ಅಥವಾ ಕೇವಲ ಡೈಮಂಡ್ ಜುಬ್ಲಿ ಕಾರ್ಯಕ್ರಮ ಮಾಡಿದರೆ, ಡೈಮಂಡ್ ಜುಬ್ಲಿ ಆಗಿಬಿಡುತ್ತದೆಯೇ? ಹಾಗೆ ಮಾಡುವುದಿಲ್ಲ ತಾನೇ? ಮೊದಲು ಸ್ವಯಂ. ಆನಂತರ ವಿಶ್ವ. ನೋಡಿರಿ ನೀವು ಉಪನ್ಯಾಸ ಹೇಳುತ್ತೀರಿ ಹಾಗೆಯೇ ಮಹಾಮಂಡಲೇಶ್ವರರು ಕೂಡ ಹೇಳುತ್ತಾರೆ ಆದರೆ ನೀವು ಹೇಳಿರುವುದಕ್ಕೆ ಪ್ರಭಾವ ಬೀರುತ್ತದೆ. ಮನಸ್ಸಿಗೆ ನಾಟುತ್ತದೆ ಏಕೆಂದರೆ ನೀವು ಮಾಡಿದ ನಂತರ ಹೇಳುತ್ತೀರಿ. ಆದರೆ ಅವರು ಕೇವಲ ಹೇಳುತ್ತಾರೆ ಅಷ್ಟೇ ಆದರೆ ಮಾಡುವುದಿಲ್ಲ ಆದ್ದರಿಂದ ಎಲ್ಲರಿಗೂ ಅಂತರ ಬರುತ್ತದೆ ಅಲ್ಲವೇ. ಯಾರಾದರೆ ಸ್ವಯಂ ಮಾಡಿ ಹೇಳುತ್ತಾರೆಯೋ ಅದರ ಪ್ರಭಾವ ಬೇರೆಯಾಗಿರುತ್ತದೆ. ಇಲ್ಲಿ ಕೂಡ ಹೇಳುತ್ತಾರಲ್ಲವೇ ಈ ಅಕ್ಕಂದಿರು ಅಥವಾ ಅಣ್ಣಂದಿರು ಹೇಳಿರುವವು ಮನಸ್ಸಿನಲ್ಲಿ ಇದ್ದುಬಿಡುತ್ತವೆ ಎಂದು. ಹಾಗೆಯೇ ಕೆಲವರ ಉಪನ್ಯಾಸ ಕೇಳುತ್ತಾರೆ ಚೆನ್ನಾಗಿದೆ ಎನ್ನುತ್ತಾರೆ ಅಷ್ಟೇ, ಆದರೆ ಅಂತರವೇನು? ಕೇವಲ ಹೇಳುವುದು ಮತ್ತು ಮಾಡಿ ಹೇಳುವುದರಲ್ಲಿ ಅಂತರವಿರುತ್ತದೆ. ಮಾಡಿ ಹೇಳುವವರ ಮಾತಿಗೆ ಸ್ವತಹವಾಗಿ ಪ್ರಭಾವಿತರಾಗುತ್ತಾರೆ. ಎಲ್ಲರೂ ವಜ್ರಗಳೇ ತಾನೆ! ಅಥವಾ ಕೆಲವರು ಬಂಗಾರ, ಕೆಲವರು ಬೆಳ್ಳಿ, ಕೆಲವರು ವಜ್ರವಾಗಿದ್ದೀರಾ? ಎಲ್ಲರೂ ವಜ್ರಗಳೆ ತಾನೇ! ವಜ್ರಗಳೇ, ಆದರೆ ಸ್ವಲ್ಪ ಹೊಳಪು ತೋರಿಸಬೇಕು. ಬಾಪ್‌ದಾದಾರವರಿಗೆ ಬಹಳ ಸಂತೋಷವಿದೆ ಏಕೆಂದರೆ ತಂದೆಯ ಖಜಾನೆಗಳಲ್ಲಿ ಬಹಳ ವಜ್ರಗಳು ಇವೆ ಮತ್ತು ಒಂದೊಂದು ವಜ್ರ ಎಷ್ಟು ಅಮೂಲ್ಯವಾದದು ಎಂದು. ಇಷ್ಟು ಆತ್ಮಿಕ ವಜ್ರಗಳು ಎಲ್ಲಾದರೂ ಸಿಗುತ್ತವೆಯೇ ಯಾರ ಬಳಿಯಾದರೂ ಇರುತ್ತವೆಯೇ? ಅಮೆರಿಕಾ, ಆಫ್ರಿಕಾ ಎಲ್ಲಾ ತಿರುಗಿ ಬನ್ನಿ, ಹುಡುಕಿ ಬನ್ನಿ, ಸಿಗುತ್ತವೆಯೇ ಆದರೆ ಇಲ್ಲಿ ನೋಡಿರಿ ಎಷ್ಟು ನಿಜವಾದ ವಜ್ರಗಳು ತಂದೆಗೆ ಲಭಿಸಿವೆಯೋ. ಆದರೆ ಆ ತರಂಗಗಳ ಹೊಳಪನ್ನು ಹರಡುವಂತೆ ತಯಾರಾಗಬೇಕು. ನಾನು ವಜ್ರ ಎಂದು ನಿಮ್ಮಲ್ಲಿ ನೀವು ಸಂತೋಷಪಡುವುದಲ್ಲ. ವಜ್ರದ ಹೊಳಪು ಮರೆಯಾಗುವುದಿಲ್ಲ. ಸತ್ಯವಾದ ವಜ್ರದ ಹೊಳಪು ಎಂದಾದರೂ ಮರೆಯಾಗುತ್ತದೆಯೇ? ಎಷ್ಟು ಅದಲು ಬದಲು ಮಾಡಿ ತೋರಿಸಿದರೂ ಹೊಳಪು ಕಾಣಿಸುತ್ತದೆ. ಇಂದಿನ ದಿನಗಳಲ್ಲಿ ಹೊರಗಿನವರು ಸತ್ಯವಾದ ವಜ್ರಗಳು ಎಂದು ತೋರಿಸಿದರೂ ಅವು ಸತ್ಯವಾದವುಗಳಲ್ಲ. ನಿಮ್ಮ ಸ್ವರ್ಗದ ವಜ್ರಗಳು ಸತ್ಯವಾದವುಗಳು. ಅವುಗಳ ಮುಂದೆ ಇವೇನು ಅಲ್ಲ. ಸತ್ಯವಾದ ವಜ್ರದ ಗುರುತು ಏನೆಂದರೆ, ಅದರ ಹೊಳಪು ನಾಲ್ಕು ಕಡೆ ವ್ಯಾಪಿಸುತ್ತಾ ಇರುತ್ತದೆ. ಹೇಗಾದರೆ ಲೈಟ್ ಪ್ರಕಾಶಿಸಿದರೆ ನಾಲ್ಕೂ ಕಡೆ ಪ್ರಕಾಶ ಇರುತ್ತದೆ ಮತ್ತು ಎಷ್ಟು ಶಕ್ತಿವಂತವಾಗಿದ್ದದರೆ ಅಷ್ಟು ಪ್ರಕಾಶ ವ್ಯಾಪಿಸುತ್ತದೆಯೋ ಹಾಗೆಯೇ ನೀವು ಕೂಡ ತರಂಗಗಳಿಂದ ಸತ್ಯವಾದ ವಜ್ರವಾದ ನಿಮ್ಮ ಹೊಳಪು ವ್ಯಾಪಿಸಬೇಕು. ಮದುಬನದಲ್ಲಿ ನೋಡಿರಿ ತಂದೆಯ ಕೋಣೆಯಲ್ಲಿ ಹೋಗುತ್ತಿದ್ದಂತೆಯೇ ವಿಶೇಷ ಅನುಭವವಾಗುತ್ತದೆ ಅಲ್ಲವೇ. ತರಂಗಗಳು ಬರುತ್ತವೆ ಅಲ್ಲವೇ ತಿಳಿದರೂ, ತಿಳಿಯದೆ ಇದ್ದರೂ, ನಿಶ್ಚಯವಿದ್ದರೂ, ಇಲ್ಲದಿದ್ದರೂ ಶಾಂತಿಯ ತರಂಗಗಳು ಅನುಭವವಾಗುತ್ತದೆ ಅಲ್ಲವೇ ಹಾಗೆಯೇ ನಿಮ್ಮೊಂದಿಗೆ ಇರುವವರಿಗೆ ಕೂಡ ನಿಮ್ಮ ಹೊಳಪಿನ ತರಂಗಗಳು ಅನುಭವವಾಗಬೇಕು. ನೀವು ಹೇಗಿರುವಿರೋ

ಹಾಗೆಯೇ ಇದ್ದೀರಿ ಎನ್ನಬಾರದು. ಮೊದಲು ನಮ್ಮೊಂದಿಗೆ ಇರುವವರಿಗೆ ಅನುಭವವಾದರೆ ಆನಂತರ ದೂರದವರೆಗೆ ಕೂಡ ಹೋಗುತ್ತವೆ.

ಪರಿವರ್ತನಾ ಶಕ್ತಿ ಚೆನ್ನಾಗಿದೆಯಲ್ಲವೇ? ಅಥವಾ ಕಡಿಮೆಯಾಗಿದೆಯೇ? ಪರಿವರ್ತನಾ ಶಕ್ತಿ ಚೆನ್ನಾಗಿದೆಯೇ. ಯಾವುದನ್ನಾದರೂ ಪರಿವರ್ತನೆ ಮಾಡಬೇಕೆಂದುಕೊಂಡಾಗ ಸಮಯ ಹಿಡಿಸುತ್ತಿಲ್ಲ ತಾನೇ? ಅಥವಾ ನೋಡುತ್ತೇವೆ, ಮಾಡುತ್ತೇವೆ ಹೀಗೆ ಯೋಚಿಸುತ್ತಿದ್ದೀರಾ. ಮಾಡಲೇಬೇಕು ಯಾರು ಮಾಡಿದರೂ, ಮಾಡದಿದ್ದರೂ ನಾನು ಮಾಡಲೇಬೇಕು ಎಂದುಕೊಳ್ಳಬೇಕು. ನೆಪ ಹೇಳುವುದಂತೂ ಎಲ್ಲರಿಗೂ ಚೆನ್ನಾಗಿ ಬರುತ್ತದೆ. ನೆಪ ಹೇಳುವುದು ಬರದವರು ಯಾರು ಇರುವುದಿಲ್ಲ. ತಿಳುವಳಿಕೆಯುಳ್ಳವರು ಏನೇನು ನೆಪವನ್ನು ತಯಾರಿಸುತ್ತಿದ್ದೀರಿ ಎಂದರೆ - ಹೀಗಾಯಿತು ಆದ್ದರಿಂದಲೇ ಹಾಗಾಯಿತು, ಅವರು ಮಾಡಿದರು ಆದ್ದರಿಂದಲೇ ಹಾಗಾಯಿತು, ನಾನಂತೂ ಚೆನ್ನಾಗಿಯೇ ಇದ್ದೇನೆ ಇವರು ನಡೆಯುತ್ತಾ ಇದ್ದರೆ ಕಪಾಳಕ್ಕೆ ಹೊಡೆದರು ಆದ್ದರಿಂದ ಬಿದ್ದೆನು. ಅವರು ಹೊಡೆಯದಿದ್ದರೆ ಬೀಳುತ್ತಿರಲಿಲ್ಲ ಆದರೆ ಅವರು ಹೊಡೆದರು ಎನ್ನುತ್ತಿದ್ದಾರೆ. ಆದರೆ ನಿಮ್ಮನ್ನು ನೀವು ಏಕೆ ರಕ್ಷಿಸಿಕೊಳ್ಳಲಾಗುತ್ತಿಲ್ಲ? ಹಾನಿ ಮಾಡುವವರ ಕೆಲಸ ಹಾನಿ ಮಾಡುವುದಾಗಿದೆ. ಆದರೆ ನಿಮ್ಮ ಕೆಲಸ ನಿಮ್ಮನ್ನು ರಕ್ಷಿಸಿಕೊಳ್ಳುವುದೇ? ಅಥವಾ ಅವರು ಹಾನಿ ಮಾಡಿದರು ಆದ್ದರಿಂದಲೇ ನಾನು ಬಿದ್ದೆನು ಎಂದು ನೆಪಗಳನ್ನು ಹೇಳುವುದೇ ರಕ್ಷಿಸಿಕೊಳ್ಳುವುದು ನಿಮ್ಮ ಕೆಲಸವೇ ಅಥವಾ ಅದು ಕೂಡ ಇತರರು ಮಾಡಬೇಕಾ? ಹಾಗಾದರೆ ಇದು ಕೂಡ ಒಂದು ನೆಪ. ಇದು ಸರಿ ಹೋಗಿದೆ. ನೋಡಿರಿ ಹೀಗೆ ಬಹಳ ಮಧುರಾತಿಮಧುರವಾದ ವಿಷಯಗಳನ್ನು ಹೇಳುತ್ತಾರೆ. ನಾಳೆಯಿಂದ ಇದು ಆಗಿಬಿಡುತ್ತದೆ ಅಲ್ಲವೇ, ಈಗ ತೀವ್ರ ಪುರುಷಾರ್ಥಿ ಆಗಿಬಿಟ್ಟಿದ್ದೇವೆ ಎನ್ನುತ್ತಾರೆ. ಮತ್ತೆ ನಾಳೆ ಇನ್ನೊಂದು ವಿಷಯ ಬರುತ್ತದೆ. ಆಗ ನಾಡಿದ್ದು ಆಗಿಬಿಡುತ್ತೇವೆ ಎನ್ನುತ್ತಾರೆ. ಹೀಗೆ ನೆಪಗಳನ್ನು ಹೇಳಬೇಡಿರಿ. ಹಾರುವ ಕಲೆಯ ಆಟದಲ್ಲಿ ನಂಬರನ್ನು ಪಡೆಯಿರಿ. ನೆಪಗಳನ್ನು ಹೇಳುವುದರಲ್ಲಿ ಅಲ್ಲ. ನಿಮ್ಮ ಸಹಯೋಗಿಗಳೆಲ್ಲರೂ ಅಂಧಕಾರದಲ್ಲಿ ಇದ್ದಾರೆ. ನಾಲ್ಕು ಕಡೆಯ ಅಂದಕಾರ ಇದೆ ಆದ್ದರಿಂದ ನಾವು ಪ್ರಕಾಶವನ್ನು ಕೊಡಲಾಗುತ್ತಿಲ್ಲ ಎಂದು ಹೇಳುತ್ತಿಲ್ಲ ತಾನೆ! ಅಂಧಕಾರದಲ್ಲಿ ಇರುವವರಿಗೆ ನೀವೇ ಬೆಳಕು ತಾನೆ? ಅಂಧಕಾರವಿದೆ ಆದ್ದರಿಂದಲೇ ಮೋಸ ಹೋದೆವು ಎಂದು ಹೇಳುತ್ತಿದ್ದೀರಿ. ಅರ್ಥಾತ್ ಲೈಟ್ ಹೌಸ್ ಎಲ್ಲಿಗೆ ಹೋಗಿಬಿಟ್ಟಿದೆ? ನಿಮಗೆ ನೀವು ಕೂಡ ಪ್ರಕಾಶವನ್ನು ಕೊಟ್ಟುಕೊಳ್ಳಲಾಗುತ್ತಿಲ್ಲವೇ? ಹಾಗಾದರೆ ಈ ವರ್ಷವು ಕಳೆದುಹೋಗುತ್ತಿದೆ. ಈಗ ಸಂಕಲ್ಪಗಳಲ್ಲಿ ಸಾಧಾರಣ ಸಂಕಲ್ಪವನ್ನು ಮಾಡಬಾರದು. ಇದರ ಪ್ರತಿಜ್ಞೆ ಮಾಡಿರಿ. ಶರೀರವೇ ಹೋಗಲಿ ಆದರೆ ಪ್ರತಿಜ್ಞೆಯನ್ನು ಬಿಡಬಾರದು ಎಷ್ಟಾದರೂ ಸಹನೆ ಮಾಡಬೇಕಾಗಬಹುದು, ಪರಿವರ್ತನೆ ಮಾಡಿಕೊಳ್ಳಬೇಕಾಗುತ್ತದೆ ಆದರೆ ಪ್ರತಿಜ್ಞೆಯನ್ನು ಮುರೆಯಬಾರದು. ಇದಕ್ಕೇ ಧೃಡ ಸಂಕಲ್ಪ ಎಂದು ಹೇಳಲಾಗುತ್ತದೆ. ಇದನ್ನು ಮಾಡುತ್ತೇವೆ. ಇದನ್ನು ಮಾಡುತ್ತೇವೆ. ಇದನ್ನು ಮಾಡುವುದಿಲ್ಲ ಎಂಬ ಬಹಳ ಒಳ್ಳೆಯ ಚಿಂತನೆಯನ್ನೇ ಮಾಡುತ್ತೀರಿ, ಬಾಪ್‌ದಾದಾರವರೂ ಸಹ ಖುಷಿಯಾಗುತ್ತಾರೆ. ತಂದೆಯವರನ್ನಂತು ಖುಷಿಪಡಿಸುತ್ತೀರಿ ಆದರೆ ಇದರಲ್ಲಿ ಧೃಡತೆಯ ಮೂಲಕ ಸದಾ ಶಬ್ಧವನ್ನು ಸೇರ್ಪಡೆ ಮಾಡಿಕೊಳ್ಳಿರಿ. ಸ್ವಲ್ಪ ಸಮಯವಂತೂ ಪ್ರಭಾವ ತೋರಿಸುತ್ತೀರಿ, ಅದಕ್ಕಾಗಿ ತಿಳಿಸಿದೆವಲ್ಲವೆ- ತಮ್ಮನ್ನು ಸದಾ ಉಳಿತಾಯದ ಅವತಾರನೆಂದು ತಿಳಿಯಿರಿ, ಅದರ ಜೊತೆಗೆ ಉಳಿತಾಯ(ಏಕಾನಾಮಿ), ಹಾಗೂ ಏಕಾಂತವಾಸಿ(ಏಕ್

ನಾಮಿ). ಹೆಚ್ಚಾಗಿ ಮಾತಿನಲ್ಲಿ ಬರಬಾರದು. ಏಕಾಂತವಾಸಿ ಆಗಿರಿ. ಯಾರು ಇಡೀ ದಿನದಲ್ಲಿ ಮಾತಿನಲ್ಲಿ ಬರುತ್ತಾರೆಯೋ ಅವರ ಸಂಕಲ್ಪ, ಸಮಯದ ಖಜಾನೆ ಎಲ್ಲವೂ ವ್ಯರ್ಥವಾಗುವುದು. ಏಕಾಂತವಾಸಿಯ ಡಬಲ್ ಅರ್ಥವಿದೆ. ಕೇವಲ ಬಾಹ್ಯರೂಪದಲ್ಲಿ ಏಕಾಂತವಲ್ಲ ಆದರೆ ಒಬ್ಬರ ಅಂತ್ಯದಲ್ಲಿ ಮುಳುಗಿಬಿಡುವುದು. ಏಕಾಂತದಲ್ಲಿರುವುದು. ಏಕಾಂತ. ಇಲ್ಲದಿದ್ದರೆ ಕೇವಲ ಬಾಹ್ಯ ಏಕಾಂತವಿದ್ದರೆ ಬೇಸರವಾಗಿಬಿಡುತ್ತೀರಿ. ಹೇಳುತ್ತೀರಿ- ಗೊತ್ತಿಲ್ಲ. ದಿನವನ್ನು ಹೇಗೆ ಕಳೆಯುವುದು! ಆದರೆ ಒಬ್ಬ ತಂದೆಯವರ ಅಂತ್ಯದಲ್ಲಿ (ಸಂಪನ್ನತೆಯಲ್ಲಿ) ಮುಳುಗಿಬಿಡಿ/ ಮಗ್ನರಾಗಿರಿ. ಹೇಗೆ ಸಾಗರದ ಆಳಕ್ಕೆ ಹೋದರೆ ಎಷ್ಟೊಂದು ಖಜಾನೆಗಳು ಸಿಗುತ್ತವೆ. ಸಂಪೂರ್ಣವಾಗಿ ಆಳದಲ್ಲಿ ಹೊರಟುಹೋಗಿ ಅರ್ಥಾತ್ ತಂದೆಯವರಿಂದ ಯಾವ ಪ್ರಾಪ್ತಿಗಳಾಗಿವೆಯೋ ಅದರಲ್ಲಿ ಮಗ್ನರಾಗಿಬಿಡುವುದು. ಕೇವಲ ಮೇಲೆ-ಮೇಲೆ ಅಲೆಗಳಲ್ಲಿ ತೇಲಾಡಬಾರದು, ಆಳದಲ್ಲಿ ಹೊರಟುಹೋಗಬೇಕು. ಮುಳುಗಿಬಿಡಬೇಕು. ನಂತರ ಅದರಲ್ಲಿ ಎಷ್ಟು ಮಜಾ ಬರುತ್ತದೆ ನೋಡಿ. ಹಾಗಾದರೆ ಸರ್ವ ಖಜಾನೆಗಳಲ್ಲಿ ಉಳಿತಾಯ ಮಾಡಿರಿ ಮತ್ತು ಒಬ್ಬ ತಂದೆಯ ಹೊರತು ಮತ್ಯಾರೂ ಇಲ್ಲ. ಇದಕ್ಕೇ ಏಕ್‌ನಾಮಿ(ಒಬ್ಬರ ನೆನಪು) ಎಂದು ಹೇಳಲಾಗುವುದು. ಇಂತಹ ಸ್ಥಿತಿಯಲ್ಲಿರುವವರು ತನ್ನ ಸರ್ವ ಖಜಾನೆಗಳನ್ನೂ ಜಮಾ ಮಾಡಿಕೊಳ್ಳುವುದಕ್ಕೆ ಸಾಧ್ಯವಾಗುವುದು, ಇಲ್ಲದಿದ್ದರೆ ಜಮಾ ಆಗುವುದಿಲ್ಲ. ಹಾಗಾದರೆ ಉಳಿತಾಯ ಮಾಡುವುದು ಗೊತ್ತಿದೆ ಅಲ್ಲವೇ? ಎಲ್ಲರಿಗೂ ಬರುತ್ತದೆ ಅಲ್ಲವೇ.

ಯಾರೊಂದಿಗೆ ಆದರೆ ಪ್ರೀತಿ ಇರುತ್ತದೆಯೋ ಆ ಪ್ರೀತಿಗೆ ಗುರುತು ಅವರನ್ನು ತಮಗಿಂತ ಮುಂದಕ್ಕೆ ಕರೆದೊಯ್ಯುತ್ತಾರೆ ಇದೇ ಪ್ರೀತಿಗೆ ಚಿಹ್ನೆ. ಹಾಗೆ ಬಾಪ್‌ದಾದಾ ಕೂಡ ಪ್ರತಿಯೊಂದು ಮಗು ನನಗಿಂತಲೂ ಮುಂದಕ್ಕೆ ಹೋಗಬೇಕು ಎಂದುಕೊಳ್ಳುತ್ತಿದ್ದಾರೆ. ಇದೇ ಪ್ರೀತಿಗೆ ಗುರುತು ಯಾರಲ್ಲಿಯೂ ಯಾವ ಲೋಪವೂ ಇರಬಾರದು ಎಲ್ಲರೂ ಸಂಪೂರ್ಣವಾಗಿ ಸಂಪನ್ನವಾಗಬೇಕು ಎಂದುಕೊಳ್ಳುತ್ತಾರೆ. ಸಂಪನ್ನವಾದರೆ ಸಂಪೂರ್ಣವಾಗುತ್ತೀರಿ. ಡಬಲ್ ವಿದೇಶಿಯರೆಂದರೆ ಡಬಲ್ ಪ್ರೀತಿ ಇದೆಯಲ್ಲವೇ ಏಕೆಂದರೆ ಸ್ಥಾಪನಾ ಪಾತ್ರದಲ್ಲಿ ಡಬಲ್ ವಿದೇಶಿಯರು ವಿಶೇಷವಾದ ಶೋಭೆ. ಸ್ಥಾಪನಾ ಪಾತ್ರದ ವಿಶೇಷ ಶೃಂಗಾರ. ಜಮಖಾತೆಯಲ್ಲಿ ವಿದೇಶಿಯರು ನಂಬರ್‌ವನ್ ತೆಗೆದುಕೊಳ್ಳುತ್ತಾರೆಯೋ ಭಾರತವಾಸಿಯರು ನಂಬರ್‌ವನ್ ತೆಗೆದುಕೊಳ್ಳುತ್ತಾರೆಯೋ ನೋಡುತ್ತೇನೆ. ಏಕೆಂದರೆ ಡಬಲ್ ವಿದೇಶಿಯರಲ್ಲಿ ಇರುವ ಸ್ವತಹ ಸಂಸ್ಕಾರ ಏನೆಂದರೆ ಲೈನ್ನಲ್ಲಿ ಇದ್ದರೂ ಕೂಡ ಬಹಳ ವೇಗವಾಗಿ ಹೋಗುತ್ತಾರೆ. ಬಿದ್ದರೂ ವೇಗವಾಗಿ ಬೀಳುತ್ತಾರೆ. ಹತ್ತಿದರೂ ವೇಗವಾಗಿ ಹತ್ತಿಬಿಡುತ್ತಾರೆ. ಈಗ ಈ ಸಂಸ್ಕಾರವನ್ನು ಜಮಾ ಖಾತೆಯಲ್ಲಿ ತೀವ್ರವಾಗಿ ಉಪಯೋಗಿಸಿರಿ. ಯಾವ ಚಿಕ್ಕ ಚಿಕ್ಕ ಸೇವಾಸ್ಥಾನಗಳು ಇವೆಯೋ ಅವು ಇನ್ನೂ ಮೊದಲ ನಂಬರ್ ತೆಗೆದುಕೊಳ್ಳಬೇಕು, ಒಳ್ಳೆಯದು.

**ನಾಲ್ಕೂಕಡೆಯ ಆತ್ಮಿಕ ಸತ್ಯ ವಜ್ರವಾದ ಆತ್ಮರಿಗೆ, ಸದಾ ಉಳಿತಾಯದ ಅವತಾರ ವಿಶೇಷ ಆತ್ಮರಿಗೆ, ಸದಾ ಉಳಿತಾಯ(ಎಕಾನಮಿ), ಏಕಾಂತಪ್ರಿಯವಾಗಿರುವ ವಿಶೇಷ ಆತ್ಮರಿಗೆ, ತಮ್ಮ ತರಂಗಗಳ ವೃತ್ತಿಯ ಹೊಳಪಿನಿಂದ ವಿಶ್ವದಲ್ಲಿ ಪ್ರಕಾಶತೆಯನ್ನು ಹರಡಿಸುವಂತಹ ಹೊಳೆಯುತ್ತಿರುವ ಆತ್ಮರಿಗೆ, ಬಾಪ್‌ದಾದಾರವರ ನೆನಪು-ಪ್ರೀತಿ ಹಾಗೂ ನಮಸ್ತೆ.**

ರಿವೈಸ್ ಕೋರ್ಸ್ 25-03-1995

***ಬ್ರಾಹ್ಮಣ ಜೀವನದ ಅತ್ಯಂತ ಶ್ರೇಷ್ಠ ಖಜಾನೆ ಸಂಕಲ್ಪದ ಖಜಾನೆ.***

ಜ್ಞಾನಕ್ಕೆ ಕೂಡ ಆಧಾರ ಸಂಕಲ್ಪ, ನಾನು ಆತ್ಮ ಶರೀರವಲ್ಲ ಎಂಬ ಸಂಕಲ್ಪ ಮಾಡುತ್ತಿದ್ದೀರಿ. ಮನನದಲ್ಲಿಯೂ ಶುದ್ಧ ಸಂಕಲ್ಪಗಳನ್ನೇ ಮಾಡುತ್ತೀರಿ, ಆದ್ದರಿಂದ ಮನನ ಶಕ್ತಿಗೂ ಆಧಾರ ಸಂಕಲ್ಪ ಶಕ್ತಿಯಾಗಿದೆ. ಮನಸ್ಸು, ಬುದ್ಧಿಗೆ ಸಂಕಲ್ಪವನ್ನು ಕೊಡುತ್ತಿದ್ದೀರಿ ಇಂದು ನಾನು ಸಹನ ಶಕ್ತಿಯನ್ನು ಧಾರಣೆ ಮಾಡಿಕೊಳ್ಳಬೇಕು ಎಂದು ಧಾರಣೆಗೂ ಆಧಾರ ಸಂಕಲ್ಪವೇ ಆಗಿದೆ. ಸೇವೆ ಮಾಡುತ್ತೀರಿ- ಯೋಜನೆ ಮಾಡುತ್ತಿದ್ದರೂ ಶುದ್ಧ ಸಂಕಲ್ಪವೇ ನಡೆಯುತ್ತದೆ ಅಲ್ಲವೇ. ಶುದ್ಧ ಸಂಕಲ್ಪದಿಂದಲೇ ಯೋಜನೆಯಾಗುವುದು. ಸೇವೆಗೂ ಸಂಕಲ್ಪವೇ ಆಧಾರವಾಗಿದೆ. ಆದ್ದರಿಂದ ಬ್ರಾಹ್ಮಣ ಜೀವನದ ವಿಶೇಷ ಖಜಾನೆ ಸಂಕಲ್ಪ ಶಕ್ತಿಯಾಗಿದೆ. ಒಂದು ವೇಳೆ ಸಂಕಲ್ಪದ ಖಜಾನೆಯನ್ನು ಉಳಿತಾಯ ಮಾಡಿಕೊಂಡು ಸಫಲ ಮಾಡಿಕೊಂಡರೆ ಉಳಿದ ಖಜಾನೆಗಳು ಸ್ವತಹವಾಗಿ ಸಫಲವಾಗುತ್ತದೆ. ಎಂದು ತಿಳಿಸುತ್ತಾ ಶಿವ ಪರಮಾತ್ಮ ಹೇಳಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಸುಖ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಎಲ್ಲದಕ್ಕಿಂತಲೂ ಶ್ರೇಷ್ಠ ಖಜಾನೆಯಾಗಿರುವ ಸಂಕಲ್ಪ ಖಜಾನೆಗೆ ಅಧಿಕಾರಿ.

2. ನಾನು ಸಂಕಲ್ಪದ ಆಧಾರದಿಂದ ನಾನು ಬಿಂದು, ನಾನು ಪರಿಶ್ತಾ ಹೀಗೆ ಯಾವ ಸ್ಥಿತಿ ಬೇಕೆಂದರೆ ಆ ಸ್ಥಿತಿಯನ್ನು ತಯಾರು ಮಾಡಿಕೊಳ್ಳುವ ಶಕ್ತಿಶಾಲಿ ಸ್ವರೂಪ.

3. ನಾನು ಜ್ಞಾನ, ಯೋಗ, ಧಾರಣೆ, ಸೇವೆಗೆ ಆಧಾರವಾದ ಸಂಕಲ್ಪ ಖಜಾನೆಯನ್ನು ಸದಾ ಸಫಲ ಮಾಡಿಕೊಳ್ಳುತ್ತಿದ್ದೇನೆ.

4. ನಾನು ನನ್ನ ಖಜಾನೆಯನ್ನು ವ್ಯರ್ಥವಾಗಿ ಕಳೆಯುವ ಸೂಕ್ಷ್ಮ ತಪ್ಪುಗಳನ್ನು ಪರಿಶೀಲಿಸಿಕೊಂಡು ಪರಿವರ್ತನೆ ಮಾಡಿಕೊಂಡಿದ್ದೇನೆ. (ಆಗ ವ್ಯರ್ಥ ಖಾತೆ ಜಮಾ ಆಗದೇ ಇರುತ್ತದೆ)

5. ನಾನು ಬ್ರಹ್ಮಾತಂದೆಯನ್ನು ಅನುಸರಿಸಿರುವ ಮಾಸ್ಟರ್ ಉಳಿತಾಯದ ಅವತಾರವಾಗಿದ್ದೇನೆ.

6. ನಾನು ನನ್ನ ಸಂಕಲ್ಪವನ್ನು ಸಮರ್ಥವಾಗಿಸಿಕೊಂಡು ಕರ್ಮ ಮತ್ತು ಮಾತನ್ನು ಕೂಡ ಸಮರ್ಥವಾಗಿಸಿಕೊಂಡಿದ್ದೇನೆ.

7. ನಾನು 1.ಉಳಿತಾಯದಿಂದ, 2.ಪರಿವರ್ತನೆಯಿಂದ ವ್ಯರ್ಥವನ್ನು ಸಮರ್ಥ ಖಾತೆಯಲ್ಲಿ ಜಮಾ ಮಾಡಿಕೊಂಡಿದ್ದೇನೆ.

8. ನಾನು ನನ್ನ ಶ್ರೇಷ್ಠ ಸಂಕಲ್ಪದ ಖಜಾನೆಯನ್ನು ಸಂಪನ್ನವಾಗಿಸಿಕೊಂಡು ಶ್ರೇಷ್ಠ ಪ್ರಾಲಬ್ಧವನ್ನು ತಯಾರು ಮಾಡಿಕೊಂಡಿರುವ ಕಾರಣ ನನ್ನ ಮುಖ ಮತ್ತು ನಡವಳಿಕೆ ಸಂಪನ್ನವಾಗಿ ಇವೆ.

9. ನಾನು ವ್ಯರ್ಥವನ್ನು ಪರಿವರ್ತನೆ ಮಾಡಿಕೊಂಡು ಜಮಾ ಮಾಡಿಕೊಂಡಿದ್ದೇನೆ. ಎಂಬ ಫಲಿತಾಂಶವನ್ನು ತೋರಿಸಿ ವ್ಯರ್ಥದಿಂದ ರಕ್ಷಣೆಯಾಗಿ ಇರುತ್ತಾ ಉಳಿತಾಯದ ಖಾತೆಯಿಂದ ಖುಷಿಯಾಗಿ ಇದ್ದೇನೆ.

10. ನಾನು ಸಂಕಲ್ಪವನ್ನು ಉಳಿತಾಯ ಮಾಡಿ ಸ್ವತಹವಾಗಿ ಸಮಯ ಎಂಬ ಖಜಾನೆಯನ್ನು ಉಳಿತಾಯ ಮಾಡಿಕೊಂಡಿದ್ದೇನೆ.

11. ನಾನು ಎಲ್ಲಿದ್ದರೂ, ಯಾವ ದೇಶದಲ್ಲಿದ್ದರೂ, ಯಾವ ಸ್ಥಾನದಲ್ಲಿದ್ದರೂ, ಎಲ್ಲರೂ ನನ್ನನ್ನು ಪ್ರಕಾಶಿಸುತ್ತಿರುವ ವಜ್ರದಂತೆ ಅನುಭವ ಮಾಡಿಕೊಂಡಿರುವ ಆತ್ಮಿಕ ವಜ್ರವಾಗಿದ್ದೇನೆ.

12. ನಾನು ಮನಸಾ ಶಕ್ತಿಯನ್ನು ಉಳಿತಾಯ ಮಾಡಿ ತೀವ್ರವಾಗಿರುವ ಮನಸಾ ಸೇವೆಯನ್ನು ಮಾಡಿ ನಡೆಯುತ್ತಾ, ನಡೆಯುತ್ತಾ ಲೈಟ್ ಹೌಸ್, ಮೈಟ್ ಹೌಸ್ಆಗಿ ವಿಶ್ವದಲ್ಲಿರುವ ಅಂಧಕಾರವನ್ನು ಸಮಾಪ್ತಿ ಮಾಡಿದ್ದೇನೆ.

13. ನಾನು ನನ್ನ ಶಕ್ತಿಶಾಲಿ ತರಂಗಗಳನ್ನು ಸತ್ಯವಾದ ವಜ್ರದಂತೆ ವ್ಯಾಪಿಸಿದ್ದೇನೆ.

14. ನಾನು ಸದಾ ಸಮರ್ಥ ಸಂಕಲ್ಪಗಳೇ ಮಾಡುತ್ತೇನೆ, ಎಂಬ ಪ್ರತಿಜ್ಞೆಯನ್ನು ಮಾಡಿ ಸಹಿಸಬೇಕಾಗಿ ಬಂದರೂ, ಪರಿವರ್ತನೆ ಮಾಡಬೇಕಾಗಿ ಬಂದರೂ, ಪ್ರತಿಜ್ಞೆಯನ್ನು ಬಿಡದ ದೃಢ ಸಂಕಲ್ಪಧಾರಿ.

15. ನಾನು ಒಬ್ಬನ ಆಳದಲ್ಲಿ ಲೀನವಾಗಿ (ತಂದೆಯಿಂದ ಲಭಿಸಿರುವ ಪ್ರಾಪ್ತಿಗಳಲ್ಲಿ ಲೀನವಾಗಿ) ಏಕಾಂತವಾಸಿ ಯಾಗಿ ಎಲ್ಲಾ ಖಜಾನೆಗಳನ್ನು ಉಳಿತಾಯ ಮಾಡಿ ಎಕಾನಮಿಯಾಗಿ ಒಬ್ಬ ತಂದೆಯ ಹೊರತು ಮತ್ಯಾರು ಇಲ್ಲ ಎನ್ನುತ್ತಾ ಏಕ್ ನಾಮಿಯಾಗಿ ಸರ್ವ ಖಜಾನೆಗಳನ್ನು ಜಮಾ ಮಾಡಿಕೊಂಡಿದ್ದೇನೆ.

**ಕರ್ಮ ಫಿಲಾಸಫಿ:** ಯಾರಿಗೆ ವ್ಯರ್ಥವಿರುತ್ತದೆಯೋ ಅವರ ಬುದ್ಧಿ ಬಲಹೀನವಾಗಿ ಇರುತ್ತದೆ. ಗೊಂದಲವಾಗುತ್ತದೆ. ನಿರ್ಣಯ ಸರಿಯಾಗಿರುವುದಿಲ್ಲ ಸದಾ ಅಯೋಮಯವಾಗುತ್ತಾರೆ. ಏನು ಮಾಡಲಿ, ಏನು ಮಾಡಬಾರದು ಎಂಬ ನಿರ್ಣಯ ಯಥಾರ್ಥವಾಗಿ ಇರುವುದಿಲ್ಲ ಮತ್ತು ವ್ಯರ್ಥ ಸಂಕಲ್ಪಗಳ ವೇಗ ಕೂಡ ಬಹಳ ತೀವ್ರವಾಗಿ ಇರುತ್ತದೆ.